ಎಂದು ಜಿಲ್ಲಾಧಿಕಾರಿಯವರಿಗೆ ಆದೇಶ ಕೊಟ್ಟಿದ್ದೇನೆ. ಈ ಸಂಬಂಧದಲ್ಲಿ ಒಂದು ಜಿ.ಓ. ಇಷ್ಟೂ ಆಗಿದೆ. ಅಲ್ಲಿ ಸಂಪೂರ್ಣ ನೀರು ಇರುವವರೆಗೂ ಆ ರೈತರಿಗೆ ನೀರು ಕೊಡಬೇಕೆಂದು ವ್ಯವಸ್ಥೆ ಮಾಡಿರುವುದರಿಂದ ಈ ಸದನದ ಮೂಲಕ ತಮ್ಮ ಮುಖಾಂತರ ಶಾಸಕರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ನೀವು ಆ ರೈತ ಸಂಘದವರಿಗೆ ಹೇಳಿ, ಅಲ್ಲಿ ಸತ್ಯಾಗ್ರಹಕ್ಕೆ ಕುಳಿತಿರುವವರನ್ನು, ಸರದಿ ಉಪವಾಸ ಮಾಡುತ್ತಾ ಇರುವವರನ್ನು ಈ ಉಪವಾಸವನ್ನು ಕೈಬಿಡಿ ಎಂದು ಹೇಳಬೇಕೆಂದು ತಮ್ಮಲ್ಲಿ ನಾನು ಮನವಿಮಾಡಿ ಕೊಳ್ಳುತ್ತೇನೆ.

೨೪ ಗಜೇಂದ್ರಗಡದಲ್ಲಿರುವ ನೇಕಾರರಿಗೆ ನೂಲನ್ನು ಒದಗಿಸುವ ವಿಚಾರ.

ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ) ––ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆ ರೋಣ ತಾಲ್ಲೂಕು ಗಜೇಂದ್ರಗಡದಲ್ಲಿಯೆ ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರು ಮುಂಗಡವಾಗಿ ಕಾರ್ಪೋರೇಷನ್ನಿನಿಂದ ನೂಲು ಸಿಗದ್ದಕ್ಕೆ ಕಂಗಾಲಾಗಿ ೧೫ ದಿನಗಳಿಂದಲೂ ನೂಲಿಗಾಗಿ ಅಲೆದಾಡುತ್ತಿದ್ದಾರೆ. ಪೂರ್ಣವಾಗಿ ನೇಕಾರಿಕೆಯನ್ನು ಅವಲಂಬಿಸಿದ ಈ ಜನಕ್ಕೆ ಕೂಡಲೇ ನೂಲನ್ನು ಒದಗಿಸಿ ಅವರನ್ನು ಉದ್ಯೋಗದಲ್ಲಿ ತೊಡಗಿಸಬೇಕು. ಇಲ್ಲವಾದಲ್ಲಿ ಪರಿಸ್ಥಿತಿಯು ಹದಗೆಟ್ಟು ಹೋಗುವುದರಿಂದ ಈಗಾಗಲೇ ನೀರುದ್ಯೋಗಿ ನೇಕಾರರು ಸತ್ಯಾಗ್ರಹವನ್ನು ಮಾಡಲು ಹೊರಟಿರುವರು. ಮಾನ್ಯ ಕಣ್ಣಕೈಗಾರಿಕಾ ಸಚಿವರ ಗಮನಕ್ಕೆ ಇದನ್ನು ತರಬಯಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್ (ಗ್ರಾಮೀಣಾಭಿವೃದ್ಧಿ ರಾಜ್ಯ ಮಂತ್ರಿಗಳು).––ಮಾನ್ಯ ಅಧ್ಯಕ್ಷರೇ, ಈಗಾಗಲೇ ಗಜೇಂದ್ರಗಡದಲ್ಲಿಯ ನೇಕಾರರಿಗೆ ಬೇಕಾದಂಥಾ ನೂಲನ್ನು ಎರಡು ದಿವಸದ ಹಿಂದೆಯೇ ಬೇಕಾದಷ್ಟು ಕೊಡಿಸಿದ್ದೇವೆ.

(ಶ್ರೀ ವೇದಾಂತ ಹೆಮ್ಮಿಗೆ.––ಸದಸ್ಯರು ಹಾಜರಿಲ್ಲ.)

೨೫ ಅನುದಾನ ಪಡೆಯುವ ಶಾಲೆಗಳಲ್ಲಿ ಬೋಧಕೇತರ ಸಿಬ್ಬಂದಿ ನೇಮಕಮಾಡುವ ವಿಚಾರ.

ಶ್ರೀ ಬಸವರಾಜ್ (ಬ್ರಹ್ಮಾವರ).––ಮಾನ್ಯ ಅಧ್ಯಕ್ಷರೇ, ಶಾಲೆಗಳಿಗೆ ಅನುದಾನ ಕೊಡುವ ಸಂದರ್ಭದಲ್ಲಿ ಸರ್ಕಾರದವರು ತಮ್ಮ ೨೭-೭-೧೯೮೩ರ ಆಜ್ಞೆಯಂತೆ ಮಿತವ್ಯಯದ ಕಾರಣದಿಂದ ಶಾಲೆಗಳಲ್ಲಿ ಬೋಧಕೇತರ ಸಿಬ್ಬಂದಿ ನೇಮಕಾತಿಗೆ ಅನುಮೋದನೆ ಹಾಗೂ ವೇತನ ಅನುದಾನ ನೀಡಲು ಬರುವುದಿಲ್ಲ. ಆದರೆ ಮೊದಲಿನ ಶಾಲೆಗಳಿಗೆ ಸಾಕಷ್ಟು ಶಿಕ್ಷಕೇತರ ಸಿಬ್ಬಂದಿಗಳ ನೇಮಕಾತಿ ಆಗಿರುತ್ತದೆ. ಹಾಗಾಗಿ ಅಲ್ಲಿ ಹೆಚ್ಚಿನ ನೇಮಕಾತಿ ಆಗದಿದ್ದರೂ ಇದ್ದ ಸಿಬ್ಬಂದಿಗಳೇ ಕೆಲಸವನ್ನು ಹಂಚಿಕೊಂಡು ಮಾಡಬಹುದು, ಆದರೆ ಹೊಸದಾಗಿ ಪ್ರಾರಂಭವಾದ ಶಾಲೆಗಳಿಗೆ ಪ್ರತಿ ವಿಭಾಗದಲ್ಲಿ ಒಬ್ಬೊಬ್ಬ ಸಿಬ್ಬಂದಿಯಾದರೂ ಬೇಡವೆ? ಒಬ್ಬ ಜವಾನ, ಒಬ್ಬ ಪೇದೆ, ಒಬ್ಬ ಗುಮಾಸ್ತ ಕನಿಷ್ಟ ಇಷ್ಟಾದರೂ ಬೋಧಕೇತರ ಸಿಬ್ಬಂದಿಗಳಿಲ್ಲದಿದ್ದರೆ ಶಾಲಾ ಕೆಲಸ ನಡೆಯುವುದೆಂತು. ಹಾಗಾಗಿ ತಾವು ಇದನ್ನು ಮನಗಂಡು ಶಾಲೆಯ ಮೂಲಭೂತವಾದ ಆವಶ್ಯಕ ಸಿಬ್ಬಂದಿಗಳಾದ ಗುಮಾಸ್ತ ಜವಾನ, ಪೇದೆಗಳಿಗೆ ಅನುಕ್ರಮವಾಗಿ ಒಂದೊಂದರಂತಾದರೂ ಮಂಜೂರಾತಿ ಕೊಟ್ಟು ಶಾಲೆಗಳು ಸಮರ್ಪಕವಾಗಿ ಕೆಲಸ ನಿರ್ವಹಿಸುವಂತೆ ಸಹಕರಿಸಬೇಕೆಂದು ಕೋರುತ್ತೇನೆ. ಮತ್ತು ದಿನಾಂಕ ೭-೮-೧೯೮೫ರಿಂದ ಜವಾನನಾಗಿ ಬಿ.ಎಮ್. ಪ್ರೌಢಶಾಲೆ, ಕುರಾಡಿಯಲ್ಲಿ ದುಡಿಯುತ್ತಿರುವ ಪರಿಶಿಷ್ಟ ವರ್ಗದ ಶ್ರೀ ವಿಶ್ವನಾಥ ನಾಯ್ಕ ಅವರಿಗೆ ಸಂಬಳ ದೊರಕುವಂತೆ ಆಜ್ಞಾಪಿಸಬೇಕೆಂದು ಕೋರುತ್ತೇನೆ.

ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಮಂತ್ರಿಗಳು).––ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವಾಗ ಯಾವ ಶಾಲೆಗಳು ಅನ್ನುವುದನ್ನು ಅದರಲ್ಲಿ ನಮೂದು ಮಾಡಿಲ್ಲ. ಆದರೂ ಕೂಡ ಸಂಬಂಧಪಟ್ಟ ಸಚಿವರಿಗೆ ಅವರು ಹೇಳಿದ ವಿಷಯವನ್ನು ತಿಳಿಸಿ ಉತ್ತರ ಕೊಡುವ ಹಾಗೆ ಬಯಸುತ್ತೇನೆ.

೨೬ ಸೊರಬ ತಾಲ್ಲೂಕಿನ ಭೂ ನ್ಯಾಯ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡಿರುವ

ವ್ಯಕ್ತಿಯ ಮೇಲಿರುವ ಆರೋಪಗಳ ಕುರಿತು.

ಶ್ರೀ ಸಿ. ಎಂ. ಉದಾಸಿ.––ಮಾನ್ಯ ಅಧ್ಯಕ್ಷರೇ, ಸೊರಬ ತಾಲ್ಲೂಕಿನ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಹಿಂದಿನ ಅಧ್ಯಕ್ಷರ ಮೇಲೆ ೪೦ ಲಕ್ಷ ರೂಪಾಯಿಗಳ ಹಣದ ದುರುಪಯೋಗವಾಗಿದೆಯೆಂಬ

ಆರೋಪವಿದೆ. ಅಲ್ಲದೆ ೧೩ ಲಕ್ಷ ರೂಪಾಯಿಗಳ ಹಣದ ದುರುಪಯೋಗ ಆವರು ಮಾಡಿದ್ದಾರೆಂದೆ ಸಿ.ಒ.ಡಿ.ಯವರು ತನಿಖೆ ಮಾಡಿ ಅವರ ಮೇಲೆ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಿದ್ದಾರೆ. ಅಂತಹ ಆಪಾದನೆಗೊಳಗಾಗಿರುವ ವ್ಯಕ್ತಿಯನ್ನು ಭೂ ನ್ಯಾಯಮಂಡಳಿಯಂತಹ ಜವಾಬ್ದಾರಿ ಸ್ಥಾನಕ್ಕೆ ನೇಮಕ ಮಾಡಿರುವುದು ಯೋಗ್ಯವೇ? ಅಂತಹ ವ್ಯಕ್ತಿಯನ್ನು ಈ ಸ್ಥಾನಕ್ಕೆ ಸೂಚಿಸಿದವರು ಯಾರು? ಇವರ ನೇಮಕಾತಿಯ ಬಗ್ಗೆ ಸರ್ಕಾರ ಮರುಯೋಚನೆ ಮಾಡುವುದೇ ಎನ್ನುವ ಬಗ್ಗೆ ಸಭೆಗೆ ತಿಳಿಸುವಿರಾ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).--ಮಾನ್ಯ ಅಧ್ಯಕ್ಷರೇ, ಹಿಂದಿನ ಮೂರು ಅಧ್ಯಕ್ಷರ ಮೇಲೆ ಅಟ್ಯಾಚ್‌ಮೆಂಟ್ ಬಿಫೋರ್ ಜಡ್ಜ್‌ಮೆಂಟ್, ಅವರ ಆಸ್ತಿಯನ್ನು ಜಪ್ತಿ ಮಾಡಿದ್ದೇವೆ. ಈ ಒಂದು ಪ್ರಕರಣ ಜಾಯಿಂಟ್ ರಿಜಿಸ್ಟ್ರಾರ್ ಮುಂದೆ ನಡೆಯುತ್ತಾ ಇದೆ. ಅವರು ಲ್ಯಾಂಡ್ ಟ್ರಿಬ್ಯೂನಲ್ ಮುಂದೆ ಹೋಗಿದ್ದಾರೆ ಎಂದು ಏನು ಹೇಳಿದ್ದಾರೆ ಅದಕ್ಕೂ ನನಗೂ ಸಂಬಂಧ ಇಲ್ಲ. ಆದರೂ ಕೂಡ ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್ (ಗ್ರಾಮೀಣಾಭಿವೃದ್ಧಿ ರಾಜ್ಯ ಮಂತ್ರಿಗಳು).--ಮಾನ್ಯ ಅಧ್ಯಕ್ಷರೇ, ಶ್ರೀ ರಾಮಯ್ಯನವರು ತಿಪಟೂರು ತಾಲ್ಲೂಕಿನ ಮೇರೆಗೆ ಒಂದು ವಿಷಯವನ್ನು ರೈಸ್ ಮಾಡಿದ್ದರು. ಆದರ ಬಗ್ಗೆ ನಾನು ಒಂದು ಸ್ಟೇಟ್‌ಮೆಂಟ್ ಮಾಡಲಿಕ್ಕೆ ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.--ಆಗಬಹುದು.

ಮಂತ್ರಿಯವರಿಂದ ಹೇಳಿಕೆ

ಹಿರಿಯೂರು ತಾಲ್ಲೂಕಿನ ರಂಗೇನಹಳ್ಳಿ ಮತ್ತು ಬಿದರಕೆರೆ ಗ್ರಾಮಗಳಲ್ಲಿ ಗ್ರಾಮಸಭೆಯನ್ನು ಏರ್ಪಡಿಸಿರುವ ಬಗ್ಗೆ.

ಶ್ರೀ ಬಿ. ಆರ್. ಯಾವಗಲ್ (ಗಾಮೀಣಾಭಿವೃದ್ಧಿ ಮಂತ್ರಿಗಳು).--ನನ್ನ ಹೇಳಿಕೆ.

ಗ್ರಾಮ ಸಭೆಯನ್ನು ಪಕ್ಷದ ಮತಿಯಿಂದ ಏರ್ಪಡಿಸಬಹುದೆ? ಅಂತಹ ಸಭೆಯಲ್ಲಿ ಅಧಿಕಾರಿಗಳು ಪಾಲ್ಗೊಳ್ಳಬಹುದೆ?

ಹಿರಿಯೂರು ತಾಲ್ಲೂಕಿನಲ್ಲಿ ರಂಗೇನಹಳ್ಳಿ ಮತ್ತು ಬಿದರಕೆರೆ ಗ್ರಾಮಗಳಲ್ಲಿ ಗ್ರಾಮ ಸಭೆಯನ್ನು ಯುವ ಜನತಾ ಪಕ್ಷ ೧೫-೧-೮೯ರಂದು ಏರ್ಪಡಿಸಿ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ಬರಮಾಡಿಕೊಂಡಿರುವುದು ಅಧಿಕಾರಿಗಳು ಜನತಾ ಪಕ್ಷದ ಬೆಂಬಲಿಗರನ್ನಾಗಿಸಿದಂತಾಗಿದೆ. ಇದರಿಂದ ತಾಲ್ಲೂಕಿನ ಜನತೆಯಲ್ಲಿ ಈ ಪಕ್ಷದ ಮುಖಂಡರನ್ನು ತಮ್ಮ ಗಳ ಕೆಲಸಕ್ಕೆ ಕಛೇರಿಗೆ ಕರೆದುಕೊಂಡು ಹೋಗಬೇಕಾಗಿ ಬಂದೊದಗಿರುವ ಪ್ರಸಂಗಕ್ಕೆ ವ್ಯಥೆಪಟ್ಟಿರುತ್ತಾರೆ. ಗ್ರಾಮಸಭೆ ಪಕ್ಷರಹಿತವಾದ ಹಾಗೂ ಎಲ್ಲರ ಸಮಸ್ಯೆಗಳನ್ನು ಆಲಿಸಿ ಪರಿಹಾರವನ್ನು ಕಂಡುಕೊಳ್ಳುವ ವ್ಯವಸ್ಥೆ ಇದರ ಮೂಲ ಉದ್ದೇಶಕ್ಕೆ ಚಿತ್ರದುರ್ಗ ಜಿಲ್ಲಾ ಮಂತ್ರಿಗಳು ಕೊಡಲಿಪೆಟ್ಟನ್ನು ಹಾಕಿದ್ದಾರೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ಮಾನ್ಯ ಸದಸ್ಯರಾದ ಶ್ರೀ ಆರ್. ರಾಮಯ್ಯನವರು ಹೇಳಿದ್ದಾರೆ.

ಅದಕ್ಕೆ ಉತ್ತರ ಈ ರೀತಿ ಇದೆ.

ಚಿತ್ರದುರ್ಗದ ಜಿಲ್ಲಾ ಸಚಿವರೂ ಹಾಗೂ ಕಾರ್ಮಿಕ ಸಚಿವರೂ ಆದ ಸನ್ಮಾನ್ಯ ಶ್ರೀ ಮಂಜುನಾಥ್ ರವರ ಸೂಚನೆಯಂತೆ ಹಿರಿಯೂರು ತಾಲ್ಲೂಕಿನ ತಹಸೀಲ್ದಾರ್‌ರವರು ಬಿದರೆಕೆರೆಯಲ್ಲಿ ಗ್ರಾಮ ಸಭೆಯನ್ನು ತಾ. ೧೯-೧-೮೯ ರಂದು ಕರೆದಿದ್ದರು. ಆ ಸಭೆಯಲ್ಲಿ ತಾಲ್ಲೂಕಿನ ಅಧಿಕಾರಿಗಳಾದ ತಹಸೀಲ್ದಾರರು, ಕ್ಷೇತ್ರಾಭಿವೃದ್ಧಿ ಅಧಿಕಾರಿ, ಸಹಾಯಕ ಕಾರ್ಯಪಾಲಕ ಅಭಿಯಂತರು (ಲೋಕೋಪಯೋಗಿ ಇಲಾಖೆ ಮತ್ತು ವಿದ್ಯುತ್‌ಚ್ಛಕ್ತಿ) ಜನಾರೋಗ್ಯ ಇಲಾಖೆ ಮತ್ತು ನೀರಾವರಿ ಇಲಾಖೆಯ ಸಹಾಯಕ ಅಭಿಯಂತರು) ಮತ್ತು ಸಹಾಯಕ ವಿದ್ಯಾಧಿಕಾರಿಗಳು ಭಾಗವಹಿಸಿದ್ದರು. ಚಿತ್ರದುರ್ಗದ ಕ್ಷೇತ್ರದ ಶಾಸಕರು ಸಭೆಯ ಅಧ್ಯಕ್ಷತೆ ವಹಿಸಿದ್ದರು ಮತ್ತು ಚಿತ್ರದುರ್ಗದ ಕಂದಾಯ ಉಪ ವಿಭಾಗಾಧಿಕಾರಿಗಳು ಮುಖ್ಯ ಅತಿಥಿಗಳಾಗಿದ್ದರು. ಆ ದಿನದ ಸಭೆಯಲ್ಲಿ ಒಬ್ಬರಿಗೆ ವೃದ್ಧಾಪ್ಯವೇತನ, ೮ ವಿಧವಾ ವೇತನ, ಒಂದು ಅಂಗವಿಕಲರ ವೇತನ ಮತ್ತು ೫ ಪ್ರಾಯೋಗಿಕ ಗೃಹ ಮಂಜೂರಾತಿ ಪತ್ರಗಳನ್ನು ಮಾನ್ಯ ಸಚಿವರು ವಿತರಣೆ ಮಾಡಿದರು.